## ಸುದ್ದಿಸಂಚಯ

**ಕನ್ನಡನಾಡಿನಲ್ಲಿ ರಾಮಕೃಷ್ಣ ಮಹಾಸಂಘದ ಮುನ್ನಡೆ**

### ಕೊಡಗಿನ ಜನತೆಗೆ ಐತಿಹಾಸಿಕ ಕ್ಷಣ: ಶ್ರೀರಾಮಕೃಷ್ಣ ಮಂದಿರಕ್ಕೆ ಶಂಕುಸ್ಥಾಪನೆ

**ಪೊನ್ನಂಪೇಟೆ, ಕೊಡಗು**

ಕೊಡಗಿನ ಪೊನ್ನಂಪೇಟೆಯಲ್ಲಿರುವ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ ಫೆಬ್ರವರಿ ೨೪ ಭಾನುವಾರ ಬೆಳಗ್ಗೆ ೯-೩೦ ರ ಶುಭಮುಹೂರ್ತದಲ್ಲಿ ಶ್ರೀರಾಮಕೃಷ್ಣ ದೇವಾಲಯದ ಶಂಕುಸ್ಥಾಪನೆಯನ್ನು ಭೂಮಿಪೂಜೆಯ ಮೂಲಕ ಕಾಶಿಪುರದ ರಾಮಕೃಷ್ಣ ಮಠದ ಅಧ್ಯಕ್ಷರೂ ರಾಮಕೃಷ್ಣ ಮಹಾಸಂಘದ ಟ್ರಸ್ಟ್ ಮಂಡಲಿಯ ಸದಸ್ಯರೂ ಆದ ಶ್ರೀಮತ್ ಸ್ವಾಮಿ ತತ್ತ್ವಬೋಧಾನಂದಜಿಯವರು ನೆರವೇರಿಸಿದರು. ಕಾರ್ಯಕ್ರಮಕ್ಕೆ ಬಹಳ ಜನ ಸಾಧುಗಳು ಮತ್ತು ಭಕ್ತರು ಆಗಮಿಸಿದ್ದರು.

ಪೂಜೆಯ ನಂತರ ನಡೆದ ಸಾರ್ವಜನಿಕ ಸಮಾರಂಭದ ಅಧ್ಯಕ್ಷತೆಯನ್ನು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ರಾಘವೇಶಾನಂದಜಿ ಅವರು ವಹಿಸಿದ್ದರು. ಪೊನ್ನಂಪೇಟೆ ಆಶ್ರಮದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಜಗದಾತ್ಮಾನಂದಜಿ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ದೇವಾಲಯದ ಔಚಿತ್ಯವನ್ನು ಉಲ್ಲೇಖಿಸಿ ಶ್ರೀರಾಮಕೃಷ್ಣರ ಸಮನ್ವಯ ಸಂದೇಶದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಈ ದೇವಾಲಯದ ನಿರ್ಮಾಣದಲ್ಲಿ ವಿಶೇಷ ನೆರವನ್ನು ನೀಡಲು ಅವರು ಎಲ್ಲರಿಗೂ ಕರೆಕೊಟ್ಟರು.



ಶಂಕುಸ್ಥಾಪನೆ ನೆರವೇರಿಸುತ್ತಿರುವ ಸ್ವಾಮಿ ತತ್ತ್ವಬೋಧಾನಂದಜಿ; ಪಕ್ಕದಲ್ಲಿ: ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ಬೋಧಸ್ವರೂಪಾನಂದಜಿ ಮತ್ತು ಬ್ರಹ್ಮಚಾರಿಗಳು

ಸಭೆಯನ್ನುದ್ದೇಶಿಸಿ ಮಾತನಾಡುತ್ತ, ಪೂಜ್ಯ ಸ್ವಾಮಿ ತತ್ತ್ವಬೋಧಾನಂದಜಿ ಅವರು ತಮ್ಮ ಸ್ವಂತ ಅನುಭವವನ್ನು ವಿವರಿಸುವ ಮೂಲಕ, ಶ್ರೀರಾಮಕೃಷ್ಣರ ಅವತಾರ ವೈಶಿಷ್ಟ್ಯವನ್ನು ಎತ್ತಿತೋರಿ, ಅವರ ಉದ್ಧಾರಕ ಶಕ್ತಿಯನ್ನು ಕೊಂಡಾಡಿದರು. ಉವಕಮಂಡಲದ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಸುಹಿತಾತ್ಮಾನಂದಜಿ ಅವರು ಮಾತನಾಡಿ, ರಾಮಕೃಷ್ಣ ದೇವಾಲಯದ ಹಿಂದಿನ ಮಹತ್ತ್ವವನ್ನು ವಿವರಿಸಿದರು. ಪ್ರಸಿದ್ಧ ಬರಹಗಾರರಾದ ಶ್ರೀ ಎದುರ್ಕಳ ಕೆ. ಶಂಕರನಾರಾಯಣ ಭಟ್ ಅವರು ಶ್ರೀರಾಮಕೃಷ್ಣರ ಮಹಿಮೆಯನ್ನು ಮುಕ್ತಕಂಠದಿಂದ ಕೊಂಡಾಡಿದರು. ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ನಿರಂಜನ ಅವರು ಅಧ್ಯಾತ್ಮದ ಆದರ್ಶದಿಂದಲೇ ಜೀವನದ ಸಾರ್ಥಕತೆ ಎಂಬುದನ್ನು ಒತ್ತಿಹೇಳಿದರು. ಆಶ್ರಮದ ಭಕ್ತರಾದ ಕುಮಾರಿ ಸುಂದರಿ ಅವರು ಕೊಡವ ಭಾಷೆಯಲ್ಲಿ ಭಾವಪೂರ್ಣವಾಗಿ ಮಾತನಾಡುತ್ತ, ಕೊಡಗಿನಲ್ಲಿ ರಾಮಕೃಷ್ಣ ದೇವಾಲಯದ ನಿರ್ಮಾಣವಾಗುತ್ತಿರುವುದು, ಈ ಪ್ರದೇಶದ ಜನರ ವಿಶೇಷ ಭಾಗ್ಯ ಎಂದು ಸಾರಿಹೇಳಿದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು, ದೇವರ ಪೂಜೆಯು ಕೇವಲ ದೇವಾಲಯಕ್ಕೆ ಮಾತ್ರ ಸೀಮಿತವಾಗಿರದೆ, ಜನಸೇವೆಯಾಗಿ ಅದು ವಿಸ್ತಾರಗೊಳ್ಳಬೇಕು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿ ಅವರು ದೇವಾಲಯಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದರ ಅಗತ್ಯವನ್ನು ಒತ್ತಿಹೇಳಿದರು. ಶ್ರೀ ಕೆ.ಎಸ್. ಚೆಂಗಪ್ಪನವರು ಧನ್ಯವಾದಗಳನ್ನು ಸಮರ್ಪಿಸಿದರು. ಡಾ.ಚಂದ್ರಶೇಖರ್ ಅವರು ಕಾರ್ಯಕ್ರಮ ನಿರೂಪಿಸಿದರು.

---

**ಬೆಂಗಳೂರು, ಬಸವನಗುಡಿ**

**ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದಲ್ಲಿ,** ದಿನಾಂಕ ೨೬.೨.೨೦೦೮ ರಂದು ಕಾಲೇಜು ವಿದ್ಯಾರ್ಥಿನಿಯರಿಗಾಗಿ ಮತ್ತು ೨೪.೨.೨೦೦೮ ರಂದು ಕಾಲೇಜು ವಿದ್ಯಾರ್ಥಿಗಳಿಗಾಗಿ ವಿಶೇಷ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಪ್ರವ್ರಾಜಿಕಾ ಭವಾನಿಪ್ರಾಣಾ ಮತ್ತು ಶ್ರೀಮತಿ ದೇವಕಿ ಮುತ್ತುಕೃಷ್ಣನ್ ಅವರು ವಿದ್ಯಾರ್ಥಿನಿಯರನ್ನು ಕುರಿತು ಮತ್ತು **ವೇದಾಂತ ಕೇಸರಿ** ಮಾಸಪತ್ರಿಕೆಯ ಸಂಪಾದಕರಾದ ಸ್ವಾಮಿ ಆತ್ಮಶ್ರದ್ಧಾನಂದಜಿ ಮತ್ತು ಶ್ರೀ ಸೂಲಿಬೆಲೆ ಚಕ್ರವರ್ತಿ ಅವರು ವಿದ್ಯಾರ್ಥಿಗಳನ್ನು ಕುರಿತು ಭಾಷಣ ಮಾಡಿದರು. ಈ ಶಿಬಿರಗಳಲ್ಲಿ ೫೦೫ ವಿದ್ಯಾರ್ಥಿನಿಯರು, ೨೮೨ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಮಂಗಳೂರು**

ಮಂಗಳೂರಿನ ರಾಮಕೃಷ್ಣ ಮಠವು, ಡಾ.ಕೆ, ಸುಬ್ರಮಣ್ಯಂ ಅವರಿಂದ **'ಈ ಯುಗದ ಆದರ್ಶ ಶ್ರೀರಾಮಕೃಷ್ಣ'** ಎಂಬ ವಿಷಯವಾಗಿ ವಿಶೇಷ ಭಾಷಣ ಕಾರ್ಯಕ್ರಮವನ್ನು ೧೭. ೨. ೨೦೦೮ ರಂದು ಆಶ್ರಮದ ಸಭಾಂಗಣದಲ್ಲಿ ಏರ್ಪಡಿಸಿತ್ತು. ಅದಲ್ಲದೆ, ಫೆಬ್ರವರಿ ೧೫ ಮತ್ತು ೧೬ ರಂದು ಸುತ್ತಮುತ್ತಲ ಕಾಲೇಜುಗಳಲ್ಲಿ ಅವರು 'ವ್ಯಕ್ತಿತ್ವ ವಿಕಸನ' ಮತ್ತು ' ಸಂಸ್ಕೃತಿ ಮತ್ತು ಯುವಕರು"– ಎಂಬ ವಿಷಯಗಳ ಬಗ್ಗೆ ಭಾಷಣ ಮಾಡಿದರು. ಒಟ್ಟಾರೆ ಈ ಕಾರ್ಯಕ್ರಮಗಳಲ್ಲಿ ಸುಮಾರು ೧,೫೦೦ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಜ್ಞಾನವಾಹಿನಿ**

**'ಬದರಿಕಾಶ್ರಮ' – ಮಾದಿಹಳ್ಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ,** ಇವರ ಸಹಯೋಗದೊಂದಿಗೆ, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ 'ಜ್ಞಾನವಾಹಿನಿ' ಕಾರ್ಯಕ್ರಮವನ್ನು ದಿನಾಂಕ ೧೬.೨.೨೦೦೮ ರಿಂದ ೨೨. ೨. ೨೦೦೮ ರವರೆಗೆ ಯಶಸ್ವಿಯಾಗಿ ನಡೆಸಲಾಯಿತು.

ಫೆಬ್ರವರಿ ೧೬ ಮತ್ತು ೧೭ ರಂದು ಬದರಿಕಾಶ್ರಮದಲ್ಲಿ **'ಯುವಜನ ಜಾಗೃತಿ ಸಮಾವೇಶ'** ನಡೆಯಿತು. ಆಶ್ರಮದ ಸಂಸ್ಥಾಪಕರಾದ ಸ್ವಾಮಿ ಓಂಕಾರಾನಂದಜಿ ಮತ್ತು ಸ್ವಾಮಿ ಮಂಗಲಾನಂದಜಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸ್ವಾಮಿ ವೀರೇಶಾನಂದ, ಪ್ರೊ.ಕೆ.ಭೈರಪ್ಪ, ಮಾತಾ ವಿವೇಕಮಯಿ, ಎಂ.ಕೆ. ಶಂಕರಲಿಂಗೇಗೌಡ ಮುಂತಾದ ಗಣ್ಯರು ಭಾಗವಹಿಸಿದ್ದರು. ಪ್ರಬಂಧಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ದಿನಾಂಕ ೧೭ ರಂದು ಬಹುಮಾನ ವಿತರಣೆ ಮಾಡಲಾಯಿತು. ಎರಡೂ ದಿನಗಳಲ್ಲಿ, ೫೦೦ಕ್ಕೂ ಹೆಚ್ಚು ಶಾಲಾಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಂತರ ಫೆಬ್ರವರಿ ೨೨ ರವರೆಗೆ, ೧೨ ಹಳ್ಳಿಗಳಲ್ಲಿ ನಡೆದ **ಜ್ಞಾನವಾಹಿನಿ ಕಾರ್ಯಕ್ರಮಗಳಲ್ಲಿ** ೪.೪೮೩ ವಿದ್ಯಾರ್ಥಿಗಳು ಮತ್ತು ೧,೬೫೦ ಸಾರ್ವಜನಿಕರು ಭಾಗವಹಿಸಿದ್ದರು.

Managing Editor : *Swami Nityasthananda* Editor : *Swami Vireshananda*

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore